ಆ ಮನೆಯ ಹಿರಿಯರು ಅತಿಥಿಗೃಹಕ್ಕೆ ಕರೆದೊಯ್ದು ತಮ್ಮ ದೇಶಪ್ರಭು ಮನೆತನದ ರೋಮಾಂಚನಕಾರಿ ಇತಿಹಾಸ ಬಿಚ್ಚಿಟ್ಟರು. ನಾರಾಯಣರಾಯರ ಮನೆತನ ಮತ್ತು ಪುರುಷೋತ್ತಮರಾಯರ ಮನೆತನಗಳ ನಡುವೆ ನಡೆದು ಬಂದ ನಿಕಟ ಬಾಂಧವ್ಯದ ಮಧುರ ನೆನಪುಗಳನ್ನು ಕೆದಕಿ, ನಾರಾಯಣರಾಯರ ಮದುವೆಯ ಸಂದರ್ಭ ತಾವು ಮಾಡಿದ ಕೆಲಸ, ಆ ಮದುವೆಗೆ ಬಂದ ಶ್ರೀಮಂತರ ತಂಡದ ವೈಭವವನ್ನು ಬಣ್ಣಿಸಿದರು. ಮದುವೆಯ ವಿಧಿ ವಿಧಾನಗಳನ್ನು ಪೂರೈಸಲು ಕಾಶಿ ರಾಮೇಶ್ವರದಿಂದ ಕರೆಸಿದ ಪುರೋಹಿತರು, ಅವರಿಗೆ ನೀಡಿದ ಕೌಪ್ಯ ಮುದ್ರೆಗಳು, ಜೋಡಿ ಶಾಲುಗಳಿಂದ ಸತ್ಕರಿಸಿದುದನ್ನು ನೆನಪಿಸಿ ನಾರಾಯಣರಾಯರ ಮನೆತನದ ಗತವೈಭವವನ್ನು ಕಣ್ಣೆದುರು ತಂದು ನಿಲ್ಲಿಸಿದರು. ಆದರೆ ಈಗ ಕಾಲ ಬದಲಾಗಿದೆ. ಪುರುಷೋತ್ತಮರಾಯರ ಮನೆತನದೊಂದಿಗೆ ಅದೇ ಸಂಬಂಧ ಮುಂದುವರೆಸುವ ಸ್ಥಿತಿಯಲ್ಲಿ ನಾರಾಯಣರಾಯರು ಇರಲಿಲ್ಲ. ಅಂಗರಕ್ಷಕರಿಲ್ಲದೆ, ಮೇಣೆಯಿಲ್ಲದೆ ಓಡಾಡದ ರಾಯರು ಇಂದು ಬರಿಗಾಲಿನಲ್ಲಿ ಸುಡುಬಿಸಿಲಿನಲ್ಲಿ ನಡೆದು ಬಂದಿದ್ದರು.

ರಾಯರು ದಿವಾನ ಖಾನೆಗೆ ಬಂದು ಮಂಚದ ಮೇಲೆ ಒರಗಿದರು. ಅಲ್ಲಿಯೆ ಹತ್ತಿರ ಆ ಮನೆತನದ ಹತ್ತು ಹನ್ನೊಂದು ಹುಡುಗರು ಆಟದಲ್ಲಿ ತಲ್ಲೀನರಾಗಿದ್ದರು. ಆ ಹಿರಿಯರು ತಮ್ಮ ಕೋಣೆಗೆ ಹೋಗಿದ್ದರು. ನಾರಾಯಣರಾಯರು ಮಲಗಿದ್ದರೂ ಮನಸ್ಸು ಸ್ಥಿರವಾಗಿರಲಿಲ್ಲ. ಹಾಸಿಗೆಯಲ್ಲಿ ಹೊರಳಾಡುತ್ತಿದ್ದರು. ನಗು ನಗುತ್ತಾ ಆಟವಾಡುತ್ತಿದ್ದ ಹುಡುಗರಲ್ಲಿ ಗದ್ದಲ ಶುರುವಾಯಿತು.

